ಸಾಕ್ಷಿಯನ್ನು ದಿಃ 11.01.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ</u> ಶ್ರೀ ಎಮ್ ಎಸ್ ಬಿ ವಕೀಲರಿಂದಃ**

ನಮ್ಮ ಕುಟುಂಬದ ಮೂಲ ವೃತ್ತಿ ಕ್ಷೌರಿಕ. ನನ್ನ ತಂದೆ ತಮ್ಮ ಜೀವಿತ ಅವಧಿಯಲ್ಲಿ ಹೊಲ ಮನೆ ವ್ಯವಹಾರವನ್ನು ಮಾಡುತ್ತಿದ್ದರು. ನಮ್ಮ ಕುಟುಂಬಕ್ಕೆ 13 ಎಕರೆ ಜಮೀನು ಇತ್ತು. ನಾನು ಕೇಸರ್ ಫೈನಾನ್ಸ ವ್ಯವಹಾರವನ್ನು ಮಾಡುತ್ತೇನೆ ಎಂದರೆ ಸರಿ. ನಮ್ಮ ಜಮೀನಿನ ಸರ್ವೇ ನಂಬರ 423 ಹಾಗೂ 357. ಸದರಿ ಜಮೀನು ನಮ್ಮ ತಂದೆ ಕ್ರಯಕ್ಕೆ ಹಿಡಿದಿದ್ದರು. ನನ್ನ ತಂದೆ ನನ್ನ ತಾಯಿ ಜಮೀನನ್ನು ಕ್ರಯಕ್ಕೆ ಕೊಟ್ಟು ಸದರಿ ಜಮೀನುಗಳನ್ನು ಕ್ರಯಕ್ಕೆ ಹಿಡಿದಿರುತ್ತಾರೆ. ನಮ್ಮ ಕುಟುಂಬಕ್ಕೆ ಪಿತ್ರಾರ್ಜಿತವಾಗಿ ಬಂದ ಜಮೀನುಗಳು ಇಲ್ಲ. ನಾನು ರಿಯಲ್ ಎಸ್ಟೇಟ್ ವ್ಯಾಪಾರವನ್ನು ಮಾಡುತ್ತೇನೆ.

ನಾನು ಪಿ ಯು ಸಿ ರವರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ನನಗೆ ವೈದ್ಯಕೀಯ ವಿಜ್ಞಾನದ ಬಗ್ಗೆ ಜ್ಞಾನ ಇಲ್ಲ. ರೋಗಿಯನ್ನು ಯಾರು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಾರೋ ಅವರ ಹೆಸರನ್ನು ಆಸ್ಪತ್ರೆಯ ದಾಖಲೆಯಲ್ಲಿ ಅಟೆಂಡರ್ ಎಂದು ನಮೂದಿಸುತ್ತಾರೆ ಎಂದರೆ ಸರಿ. ನಿಡಿ-23 ಈಶ್ವರಪ್ಪನ ಕೇಸ್ ಶೀಟ್ ಎಂದರೆ ಸರಿ. ಅದರಲ್ಲಿ ನನ್ನ ಹೆಸರು ನಮೂದಿಲ್ಲ ಎಂದರೆ ಸರಿ. ನಾನು ದಿಃ 27.02.2014 ರಂದು ಈಶ್ವರಪ್ಪನನ್ನು ಎಸ್ ಡಿ ಎಮ್ ಆಸ್ಪತ್ರೆಗೆ ದಾಖಲು ಪಡಿಸಿರುತ್ತೇನೆ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇಲ್ಲ ಎಂದರೆ ಸರಿ. ನಾನು ವಾದಿ ಹಾಗೂ ಪ್ರತಿವಾದಿಯ ಕುಟುಂಬದ ಸದಸ್ಯನಲ್ಲ ಎಂದರೆ ಸರಿ. ಅವರ ಸಂಬಂಧಿಕನಲ್ಲ ಎಂದರೆ ಸರಿ. ನಾನು ಎಸ್ ಡಿ ಎಮ್ ಆಸ್ಪತ್ರೆಯಲ್ಲಿ ಇದ್ದೆನು ಎಂದು ತೊರೀಸಲು ನನ್ನ ಬಳಿ ದಾಖಲೆಗಳು ಇಲ್ಲ ಎಂದರೆ ಸರಿ. ಈಶ್ವರಪ್ಪನು 2-3 ದಿನಗಳ ನಂತರ ಚೇತರಿಕೆ ಕಂಡಿದ್ದೆನು ಎಂದು ನಾನು ಯಾವುದೇ ವೈದ್ಯಕೀಯ ದಾಖಲೆಗಳನ್ನು ನೋಡಿಲ್ಲ. ಸಾಕ್ಷಿಯು ಸ್ವತಃ ಈಶ್ವರಪ್ಪನು ಚೇತರಿಸಿಕೊಂಡ ಬಗ್ಗೆ ವೈದ್ಯರು ಮೌಖಿಕವಾಗಿ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಕೇಸ್ ಶೀಟನಲ್ಲಿ ರೋಗಿಯನ್ನು ಪ್ರತಿನಿತ್ಯ ತಪಾಸಣೆ ಮಾಡಿದ ಬಗ್ಗೆ ಹಾಗೂ ಚಿಕಿತ್ಸೆ ನೀಡಿದ ಬಗ್ಗೆ ಪ್ರತಿನಿತ್ಯದ ವ್ಯವಹರಿಕೆಗಳು ನಮೂದಿರುತ್ತವೆ ಎಂದರೆ ಸರಿ. ಈಶ್ವರಪ್ಪನ ಕೇಸ್ ಶೀಟ-ನಿಡಿ-23 ರಲ್ಲಿ ಈಶ್ವರಪ್ಪನ ಆರೊಗ್ಯದಲ್ಲಿ ಯಾವುದೇ ಚೇತರಿಕೆ ಕಂಡು ಬಂದಿಲ್ಲ ಎಂದು

ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವೈದ್ಯರು ಈಶ್ವರಪ್ಪನು ಚೇತರಿಕೆ ಕಂಡಿದ್ದನು ಎನ್ನುವ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ನನಗೆ ಹೇಳಿದ ವೈದ್ಯರು ಹೆಸರು ನನಗೆ ನೆನಪಿಲ್ಲ. ವೈದ್ಯರ ಹೆಸರನ್ನು ಮು. ವಿ. ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ. ಅದೇ ರೀತಿ ನನ್ನ ಮು. ವಿ. ಪ್ರಮಾಣ ಪತ್ರದಲ್ಲಿ ಈಶ್ವರಪ್ಪನು ಯಾವ ದಿನಾಂಕದಂದು ಚೇತರಿಕೆಗೊಂಡಿದ್ದನು ಎಂದು ಹೇಳಿ ಬರೆಸಿಲ್ಲ.

ಈಶ್ವರಪ್ಪನು ದಿಃ 08 ರಂದು ಮೃತ್ಯು ಪತ್ರವನ್ನು ಬರೆಯುತ್ತೇನೆ ಎಂದು ನನ್ನ ಎದುರಿಗೆ ಹೇಳಿದ್ದರು, ಸದರಿ ವಿಷಯವನ್ನು ನನ್ನ ಮು. ವಿ. ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ಈಶ್ವರಪ್ಪನವರು ಅನಾರೋಗ್ಯದಿಂದ ಬಳಲುತ್ತಾ ಇದ್ದುದರಿಂದಲೇ ಅವರಿಗೆ ನಾನು ನೀವು ಆರಾಮಾಗಿ ಎಂದು ಹೇಳಿರುತ್ತೇನೆ. ಈಶ್ವರಪ್ಪ ಮ್ಹಾ ಇವನು ಮೃತ್ಯು ಪತ್ರವನ್ನು ಬರೆಯಲು ದೈಹಿಕವಾಗಿ ಹಾಗೂ ಮಾನಸಿಕವಾಗಿ ಆರೋಗ್ಯವಾಗಿದ್ದಾನೆ ಎಂದು ವೈದ್ಯರನ್ನು ನಾನು ಕೇಳಿರುತ್ತಿರಾ ಎಂದರೆ ಸಾಕ್ಷಿಯು ನಾನು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ನಾನು ವೈದ್ಯರಿಂದ ಈಶ್ವರಪ್ಪ ಮಾನ್ವಿ ಇವರ ದೈಹಿಕ ಹಾಗು ಮಾನಸಿಕ ಆರೊಗ್ಯದ ಬಗ್ಗೆ ಯಾವುದೇ ದಾಖಲೆಗಳನ್ನು ಪಡೆದುಕೊಂಡಿಲ್ಲ.

ಈಶ್ವರಪ್ಪನು ದಾಖಲಾದ ವಾರ್ಡ ಹಾಗೂ ಕೊಠಡಿಯ ಸಂಖ್ಯೆ ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ಮೊದಲನೇ ಮಹಡಿಯಲ್ಲಿ ಇದ್ದನು ಎಂದು ನುಡಿಯುತ್ತಾರೆ. ಈ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿ ಬರೆಸಿಲ್ಲ. ಈಶ್ವರಪ್ಪನಿಗೆ ಸೇರಿದ ಎಲ್ಲ ವ್ಯವಹಾರಗಳನ್ನು ನಾನು ಮಾಡುತ್ತಾ ಇದುದ್ದರಿಂದ ಅವರಿಗೆ ಸೇರಿದ ಸ್ವತ್ತುಗಳ ದಾಖಲೆಗಳು ನನ್ನ ಬಳಿ ಇದ್ದವು. ಸದರಿ ದಾಖಲೆಗಳನ್ನು ನಾನು ಅರ್ಜಿ ಕೊಟ್ಟು ಪಡೆದುಕೊಂಡಿರಲಿಲ್ಲ. ನಾನು ಮೃತ ಈಶ್ವರಪ್ಪನ ಜಿ ಪಿ ಎ ಅಥವಾ ಎಸ್ ಪಿ ಎ ಹೊಂದಿರುವ ಅಧಿಕಾರಸ್ಥನಲ್ಲ. ಈಶ್ವರಪ್ಪನ ಕುಟುಂಬದ ವ್ಯವಹಾರ ಮಾಡುವ ಬಗ್ಗೆ ನನ್ನ ಬಳಿ ಅಧಿಕಾರ ಪತ್ರ ಇಲ್ಲ. ನನ್ನ ಬಳಿ ಇದ್ದಂತಹ ಈಶ್ವರಪ್ಪ ಮಾನ್ವಿ ಇವರ ಕುಟುಂಬಕ್ಕೆ ಸೇರಿದ ಸ್ವತ್ತುಗಳ ದಾಖಲೆಗಳಲ್ಲಿ ಈಶ್ವರಪ್ಪ ಇವರ ಹೆಸರು ಮಾತ್ರ ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ಸ್ವತಃ ಜಂಟಿ ಹೆಸರುಗಳು ನಮೂದಿದ್ದವು ಎಂದು ನುಡಿಯುತ್ತಾರೆ. ನನ ಬಳಿ ಇದ್ದಂತಹ ದಾಖಲೆಗಳು ಯಾವ ಯಾವ ಸಿ ಟಿ ಎಸ್ ನಂ. ಹಾಗೂ ಯಾವ ಯಾವ ಜಮೀನುಗಳು ದಾಖಲೆಗಳು ಎಂದರೆ ಸಾಕ್ಷಿಯು ಆಸ್ತಿಗಳು ತುಂಬಾ ಇದ್ದುದರಿಂದ ಅವುಗಳ ಸಂಖ್ಯೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅವರ ದಾಖಲೆಗಳನ್ನು ನಾನೇ

ತಗಿಸಿಕೊಂಡಿದ್ದೇನೆ. ಯಾವ ದಿನಾಂಕದಂದು ಅರ್ಜಿ ಕೊಟ್ಟಿದ್ದೇನೆ ಎಂದು ನೆನಪಿಲ್ಲ.

ನಾನು ಬರೆದಿದ್ದೆನು ಎಂದು ಹೇಳುವ ಕಚ್ಚಾ ಕಾಗದದ ಮೇಲೆ ಬರೆದಂತಹ ಮೃತ್ಯು ಪತ್ರವನ್ನು ಈಶ್ವರಪ್ಪನ ಕೈಯಲ್ಲಿ ಕೊಟ್ಟಿರುತ್ತೇನೆ. ಈ ವಿಷಯಮ್ನ ಮು.ವಿ. ಪ್ರಮಾಣ ಪತ್ರದಲ್ಲಿ ಉಲ್ಲೆಖಿಸಿಲ್ಲ ಎಂದರೆ ಸರಿ. ಈಶ್ವರಪ್ಪ ಮಾನ್ವಿ ಇವನು ಮಾತನಾಡುವಂತಹ ಪರಿಸ್ಥಿತಿಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈಶ್ವರಪ್ಪ ಮಾನ್ವಿ ಇವನು ಕಾಗದವಾಯಿತು ಎಂದು ಹೇಳುವ ದಿನಾಂಕದಂದು ಮಾತನಾಡುವಂತಹ ಪರಿಸ್ಥಿತಿಯಲ್ಲಿ ಇದ್ದನು ಎಂದು ತೋರಿಸಲು ವೈದ್ಯರ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಪ್ರಶ್ನಿತ ಮೃತ್ಯು ಪತ್ರವನ್ನು ಧಾರವಾಡದ ಹಳೆಯ ಕೋರ್ಟನ ಹತ್ತಿರ ಡಿ ಟಿ ಪಿ ಸೆಂಟರಿನಲ್ಲಿ ಮಾಡಿಸಿರುತ್ತೇನೆ. ಸದರಿ ಡಿ ಟಿ ಪಿ ಸೆಂಟರಿನ ಹೆಸರು ನೆನಪಿಲ್ಲ. ಕಾಗದವನ್ನು ಬರೆದವರ ಹಾಗೂ ಗಣಕಯಂತ್ರದಲ್ಲಿ ತಯಾರಿಸಿದ ಹೆಸರನ್ನು ಪತ್ರದಲ್ಲಿ ಬರೆಯಬೇಕು ಎಂದರೆ ಸರಿ. ಪ್ರಶ್ನಿತ ಮೃತ್ಯು ಪತ್ರದಲ್ಲಿ ಯಾರು ಗಣಕಯಂತ್ರದಲ್ಲಿ ತಯಾರಿಸಿದವರ ಅವರ ಹೆಸರು ಮೃತ್ಯು ಪತ್ರದಲ್ಲಿ ಇಲ್ಲ ಎಂದರೆ ಸರಿ. ಹಳೆ ಕೋರ್ಟು ಬಳಿ ಯಾವುದೇ ಡಿ ಟಿ ಪಿ ಸೆಂಟರ್ ಇಲ್ಲ ಎಂದರೆ ಸರಿಯಲ್ಲ. ಯಾವ ಬಿಲ್ಡಿಂಗನಲ್ಲಿದೆ ಎಂದು ಸಹ ನೆನಪಿಲ್ಲ. ಪ್ರಮಾಣ ಪತ್ರದಲ್ಲಿ ಡಿ ಟಿ ಪಿ ಸೆಂಟರ್ ಹೆಸರು ಹಾಗೂ ವಿಳಾಸ ನಮೂದಿಸಿಲ್ಲ ಎಂದರೆ ಸರಿ. ಪ್ರಶ್ನಿತ ಮೃತ್ಯು ಪತ್ರದಲ್ಲಿ ನಾನೇ ಬರೆದು, ನಾನೇ ಗಣಕಯಂತ್ರದಲ್ಲಿ ತಯಾರಿಸಿಕೊಂಡು ಬಂದು ಅದನ್ನು ಈಶ್ವರಪ್ಪ ಮಾನ್ವಿ ಇವರಿಗೆ ಓದಿ ಹೇಳಿದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ.

ಒಂದು ಕಾಗದಕ್ಕೆ ರುಜು ಮಾಡುವ ವ್ಯಕ್ತಿ ಅವನು ಆ ಕಾಗದವನ್ನು ತಯಾರಿಸದೇ ಇದ್ದಲ್ಲಿ ಹಾಗೂ ಅದನ್ನು ತಯಾರಿಸಕ್ಕೆ ಮಾಹಿತಿ ಕೊಡದೇ ಇದ್ದ ಪಕ್ಷದಲ್ಲಿ ಅಂತಹ ಕಾಗದವನ್ನು ಯಾರು ತಯಾರಿಸುತ್ತಾರೋ ಅವರು ಅಂತಹ ವ್ಯಕ್ತಿಗೆ ಸದರಿ ಕಾಗದಲ್ಲಿಯ ಎಲ್ಲಾ ಮಾಹಿತಿಯನ್ನು ಓದಿ ಹೇಳಿ ಹೇಳಬೇಕಾಗುತ್ತದೆ ಹಾಗೂ ಆ ಬಗ್ಗೆ ಅಂತಹ ಕಾಗದದಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಸರಿ. ಈ ಮೇಲೆ ಹೇಳಿದ ವಿಷಯಗಳಂತೆಯೇ ಪ್ರಶ್ನಿತ ನಿಪಿ-33 ರಲ್ಲಿ ಎಲ್ಲಿಯೂ ಉಲ್ಲೇಖವಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ಬಳಲುತ್ತಾ ಇದ್ದಂತಹ ವ್ಯಕ್ತಿಯು ಮೃತ್ಯು ಪತ್ರವನ್ನು ಬರೆಯಬೇಕಾದರೆ ಆ ಆಸ್ಪತ್ರೆಯ ವೈದ್ಯರಿಂದ ಅಂತಹ ವ್ಯಕ್ತಿಯ ಆರೋಗ್ಯದ ಬಗ್ಗೆ, ದೈಹಿಕ ಹಾಗೂ ಮಾನಸಿಕ ಸ್ಥಿತಿಯ ಬಗ್ಗೆ ಪ್ರಮಾಣ ಪತ್ರವನ್ನು ಪಡೆಯಬೇಕಾಗುತ್ತದೆ ಎಂದರೆ

ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ಯಾವುದೇ ಕಾಗದ ಮೇಲೆ ಇರುವಂತಹ ಈಶ್ವರಪ್ಪ ನ ಸಹಿಯನ್ನು ಗುರುತಿಸಲಾಗುತ್ತದೆಯೋ ಅಥವಾ ಇಲ್ಲವೋ ಎಂದರೆ ಸಾಕ್ಷಿಯು ಕ್ರಯ ಪತ್ರದಲ್ಲಿ ಇರುವಂತಹ ಸಹಿಯನ್ನು ಮಾತ್ರ ಗುರುತಿಸಬಲ್ಲೆ ಎಂದು ನುಡಿಯುತ್ತಾರೆ. ಈಶ್ವರಪ್ಪನ ಸಹಿಯನ್ನು ಕ್ರಯ ಪತ್ರದಲ್ಲಿ ಇರುವಂತಹ ಸಹಿಯನ್ನು ಹೊರತು ಪಡಿಸಿ ಬೇರೇ ಎಲ್ಲಿಯೇ ಇದ್ದರೂ ಸಹ ಗುರುತಿಸಲು ಆಗುವುದಿಲ್ಲ. ಸಾಕ್ಷಿಗೆ ಒಂದು ವಕಾಲತ ನಾಮೆಯನ್ನು ತೊರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಈಶ್ವರಪ್ಪನ ಸಹಿ ಹೌದು ಅಥವಾ ಅಲ್ಲವೋ ಎಂದರೆ ಸಾಕ್ಷಿಯು ನೆನಪಾಗುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅದೇ ರೀತಿ ಪ್ರಮಾಣ ಪತ್ರದಲ್ಲಿಯ ಸಹಿಗಳು ಸಹ ನೆನಪಾಗುತ್ತಿರುವುದಿಲ್ಲ. ಸಾಕ್ಷಿಗೆ ಒಂದು ಪ್ರಮಾಣ ಪತ್ರವನ್ನು ತೋರಿಸಿ ಅದರಲ್ಲಿ ಈಶ್ವರಪ್ಪನ ಸಹಿ ಇದೆ ಎಂದು ಗುರುತಿಸಿದ್ದರಿಂದ ಸದರಿ ದಾಖಲೆಯನ್ನು **<u>ನಿಡಿ-24</u>** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು **<u>ನಿಡಿ-24(ಎ) ಹಾಗೂ (ಬಿ)</u>** ಎಂದು ಗುರುತಿಸಲಾಯಿತು. ಈಶ್ವರಪ್ಪ ತನ್ನ ಸಹಿಯನ್ನು ಮಾತ್ರ ಮಾಡುತ್ತಿದ್ದನು ಎಂದರೆ ಸಾಕ್ಷಿಯು ಸಹಿ ಮಾಡಿ ಬ್ರಾಕೆಟಿನಲ್ಲಿ ಇನಿಷಿಯಲ್ ನ್ನು ಬರೆಯುತ್ತಿದ್ದನು ಎಂದು ನುಡಿಯುತ್ತಾರೆ. ನಿಡಿ-24 ರಲ್ಲಿ ಎಲ್ಲಿಯೂ ಸಹ ಬ್ರಾಕೆಟನಲ್ಲಿ ಇನಿಷಲ್ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಡಿ-24 ರಲ್ಲಿಯ ಈಶ್ವರಪ್ಪನ ಸಹಿಯ ಕೆಳಗೆ ಇನಿಷಿಯಲ್ ನ್ನು ಬ್ರಾಕೆಟಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಹೇಳುವಂತಹ ಕ್ರಯ ಪತ್ರಗಳಲ್ಲಿ ಈಶ್ವರಪ್ಪನು ರುಜು ಮಾಡಿ ತನ್ನ ಇನಿಷಿಯಲಗಳನ್ನು ಹಾಕುತ್ತಿರಲಿಲ್ಲ ಎಂದರೆ ಸರಿಯಲ್ಲ.

ನಿಪಿ-33 ರಲ್ಲಿ ನಾನು ಈಶ್ವರಪ್ಪನ ಸಹಿಯನ್ನು ಗುರುತಿಸಿಕೊಂಡು ನನ್ನ ಸಹಿಯನ್ನು ಮಾಡಿಲ್ಲ ಎಂದರೆ ಸಾಕ್ಷಿಯು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-33 ರಲ್ಲಿ ನಾನು ಈಶ್ವರಪ್ಪನ ಸಹಿಯನ್ನು ಗುರುತಿಸಿ ನನ್ನ ಸಹಿಯನ್ನು ಮಾಡಿರುತ್ತೇನೆ ಎಂದು ಉಲ್ಲೆಖವಿಲ್ಲ ಎಂದರೆ ಸರಿ. ನಾನು ಹೇಳುವಂತಹ ಮೃತ್ಯು ಪತ್ರದಲ್ಲಿ ಎಲ್ಲ ಆಸ್ತಿಗಳ ಸಂಖ್ಯೆಗಳನ್ನು ಉಲ್ಲೇಖಿಸಿಲ್ಲ ಎಂದರೆ ಸರಿಯಲ್ಲ. ಈಶ್ವರಪ್ಪನಿಗೆ ಸೇರಿದ ಸ್ವತ್ತುಗಳು ಲಕ್ಕುಂಡಿ ಗ್ರಾಮದಲ್ಲಿ ಇರುವುದಿಲ್ಲ. ಲಕ್ಕುಂಡಿಯಲ್ಲಿ ಈಶ್ವರಪ್ಪನಿಗೆ ಆಸ್ತಿಗಳು ಇದ್ದವೋ ಅಥವಾ ಇಲ್ಲವೋ ಎನ್ನುವ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ಮಲ್ಲಸಮುದ್ರದಲ್ಲಿರುವ ಸ್ವತ್ತುಗಳ ದಾಖಲೆಗಳನ್ನು ನಾನು ನೊಡಿದ್ದೇನೆ. ಮಲ್ಲಸಮುದ್ರದ ಸ್ವತ್ತುಗಳ ಸಂಖ್ಯೆ ಹಾಗೂ

ವಿಸ್ತೀರ್ಣ ಇದರ ಬಗ್ಗೆ ನಿಪಿ-33 ರಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ನಿಪಿ-33 ರಲ್ಲಿ ಹೇಳಲಾದ ಸ್ವತ್ತುಗಳ ಸಂಖ್ಯೆಗಳ ವಿಸ್ತೀರ್ಣ ವನ್ನು ಅದರಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ-33 ರಲ್ಲಿ ನಮೂದಿಸಿದ ಸ್ವತ್ತುಗಳು ಈಶ್ವರಪ್ಪನ ಸಂಪೂರ್ಣ ಮಾಲ್ಕಿ ಹಾಗೂ ಕಬ್ಜಾ ಇದ್ದವು ಎನ್ನುವ ಬಗ್ಗೆ ನೀವು ದಾಖಲೆಯನ್ನು ನೋಡಿಲ್ಲ ಎಂದರೆ ಸಾಕ್ಷಿಯು ನಾನು ನೋಡಿದ್ದೇನೆ ಎಂದು ನುಡಿಯುತ್ತಾರೆ. ಹಳೆ ಮನೆ ಹಾಗೂ ಪೆಟ್ರೋಲ್ ಬಂಕ್ ಸ್ವತ್ತುಗಳು ಮಾತ್ರ ಈಶ್ವರಪ್ಪನ ಸಂಪೂರ್ಣ ಮಾಲ್ಕಿ ಹಾಗೂ ಕಬ್ಜಾ ಇದ್ದ ದಾಖಲೆಗಳನ್ನು ನೋಡಿರುತ್ತೇನೆ. ಅವುಗಳ ಸಿ ಟಿ ಎಸ್ ನಂ. ನೆನಪಿಲ್ಲ. ಈ ಸ್ವತ್ತುಗಳು ಈಶ್ವರಪ್ಪ, ಸರೋಜಿನಿ ಹಾಗೂ ಪ್ರಕಾಶ ಉರ್ಫ ಮಲ್ಲೇಶ ಇವರ ಜಂಟಿ ಯಲ್ಲಿರುತ್ತದೆ ಎಂದರೆ ಸರಿಯಲ್ಲ. ಈಶ್ವರಪ್ಪ ಮಾನ್ವಿ ಇವನು ಅನಾರೋಗ್ಯದಿಂದ ಬಳಲುತ್ತಾ ಇದ್ದುದರಿಂದ ಹಾಗೂ ದೈಹಿಕ ಹಾಗೂ ಮಾನಸಿಕ ಸ್ಥಿತಿ ಸರಿಯಾಗಿ ಇಲ್ಲದೇ ಇರುವುದರಿಂದ ಅವನು ನನಗೆ ಪ್ರಶ್ನಿತ ನಿಪಿ-33 ನ್ನು ಬರೆಯಲು ಮಾಹಿತಿಯನ್ನು ನೀಡಿರುವುದಿಲ್ಲ ಹಾಗೂ ಅದನ್ನು ನನ್ನಿಂದ ಬರೆಯಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-33 ನ್ನು ಬರೆಯುವ ಪೂರ್ವದಲ್ಲಿ ವೈದ್ಯರಿಂದ ಪರವಾನಿಗೆಯನ್ನು ಪಡೆದಿಲ್ಲ. ನಿಪಿ-33 ರಲ್ಲಿ ಇರುತ್ತವೆ ಎಂದು ಹೇಳುವಂತಹ ಈಶ್ವರಪ್ಪನ ಸಹಿಗಳನ್ನು ನಾನು ಹಾಗೂ ವಾದಿ ಸೇರಿಕೊಂಡು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ರಿಯಲ್ ಎಸ್ಟೇಟ್ ವ್ಯಾಪಾರವನ್ನು ಮಾಡುತ್ತಾ ಇದುದರಿಂದ ದಾವಾ ಸ್ವತ್ತುಗಳು ಹೆಚ್ಚು ಮೌಲ್ಯವುಳ್ಳಗಳಾಗಿದ್ದರಿಂದ ಅವುಗಳನ್ನು ಕಬಳಿಸುವ ದುರುದ್ದೇಶವನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ. ಮೃತ ಈಶ್ವರಪ್ಪನು ಮೃತ್ಯು ಪತ್ರವನ್ನು ಬರೆಯುವಂತಹ ಇರಾದೆಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ. ಹಾಗೂ ಅವನು ನನ್ನಿಂದ ನಿಪಿ-33 ನ್ನು ಬರೆಸಿಲ್ಲ ಎಂದರೆ ಸರಿಯಲ್ಲ.

ನಿಪಿ-33 ರಲ್ಲಿ ನಾನು ಈಶ್ವರಪ್ಪನ ಎಲ್ಲ ವ್ಯವಹಾರವನ್ನು ಮಾಡುತ್ತಾ ಇದ್ದೆನು ಎನ್ನುವ ಬಗ್ಗೆ ಉಲ್ಲೇಖಿಸಿಲ್ಲ ಎಂದರೆ ಸರಿ. ಅದೇ ರೀತಿ ನಿಪಿ-33 ರ ಬಗ್ಗೆ 1 ನೇ ಪ್ರತಿವಾದಿಗೆ ಮಾಹಿತಿ ಇದೆ ಅವರಿಗೂ ತಿಳಿಸಲಾಗಿದೆ ಎನ್ನುವ ಬಗ್ಗೆ ಅದರಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ಅದೇ ರೀತಿ ಸುಲೋಚನಾ ಮಾನ್ವಿ ಇವರ ಮೃತ್ಯು ಪತ್ರಕ್ಕೆ ಒಪ್ಪಿಗೆ ಇದೆ ಎನ್ನುವ ಬಗ್ಗೆ ನಿಪಿ-33 ರಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ಮೃತ್ಯು ಪತ್ರದ ಬಗ್ಗೆ 1 ನೇ ಪ್ರತಿವಾದಿಯ ಒಪ್ಪಿಗೆ ಇದೆ ಎಂದು ನಿಪಿ-33 ರಲ್ಲಿ ಉಲ್ಲೇಖವಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲವು ಬೆಲೆ ಬಾಳುವಂತಹ ಸ್ವತ್ತುಗಳು ಎಂದರೆ ಸರಿ. ನಾನು ರಿಯಲ್ ಎಸ್ಟೇಟ್ ವ್ಯಾಪಾರವಾನ್ನು

ಮಾಡುತ್ತಾ ಇದ್ದುದರಿಂದ ದಾವಾ ಸ್ವತ್ತುಗಳ ಮೇಲೆ ಕಣ್ಣು ಇದ್ದು, ಅವುಗಳನ್ನು ಕಬಳಿಸುವ ಉದ್ದೇಶವನ್ನು ಹೊಂದಿರುತ್ತೇನೆ ಎಂದರೆ ಸರಿಯಲ್ಲ. ಮು. ವಿ. ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. 18 ಆಸ್ತಿಗಳ ವಿಷಯವಾಗಿ ಈ ದಾವೆಯನ್ನು ಸಲ್ಲಿಸಲಾಗಿದೆ. ಏನು ಪರಿಹಾರ ಕೋರಿರುತ್ತಾರೆ ಎಂದು ಮಾಹಿತಿ ಇಲ್ಲ. ವಾದಿಯ ಕೋರಿಕೆಯ ಮೇರೆಗೆ ಸಾಕ್ಷ ನುಡಿಯುತ್ತಾ ಇದ್ದೇನೆ ಎಂದರೆ ಸರಿಯಲ್ಲ. ಇದೇ ರೀತಿ ಸಾಕ್ಷ ಹೇಳಬೇಕು ಎಂದು ನನಗೆ ಯಾರು ಮಾಹಿತಿ ನೀಡಿಲ್ಲ. ಪ್ರಮಾಣ ಪತ್ರವನ್ನು ತಯಾರಿಸಲು ಮಾಹಿತಿಯಿನ್ನು ವಕೀಲರು ನೀಡಿರುತ್ತಾರೆ. ದಾವೆಯ ಬಗ್ಗೆ ನನಗೆ ಮಾಹಿತಿ ಇಲ್ಲದಿದ್ದರೂ ಸಹ ವಾದಿಯ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ: 11.01.2022
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.

ಸಾಕ್ಷಿಯನ್ನು ದಿಃ 11.01.2022 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಶ್ರೀ ಎಮ್ ಎಸ್ ಬಿ ವಕೀಲರಿಂದಃ**

2014 ರಲ್ಲಿ ನನ್ನ ಮದುವೆಯಾಗಿದೆ. ನನ್ನ ಪತಿಯ ಊರು ಹುಬ್ಬಳ್ಳಿ. ಮದುವೆಯಾದ ನಂತರ ನಾನು ಖಾಯಂವಾಗಿ ಹುಬ್ಬಳ್ಳಿಯಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ಅಧಾರ ಕಾರ್ಡ ಇತರೇ ಗುರುತಿನ ಚೀಟಿಗಳು ಹುಬ್ಬಳ್ಳಿ ವಿಳಾಸವನ್ನು ತೋರಿಸುತ್ತದೆ. ಪ್ರಮಾಣ ಪತ್ರದಲ್ಲಿ ವಾಸಸ್ಥಳ ಬೇಟಗೇರಿ ಎಂದು ತೊರಿಸಿರುತ್ತೇನೆ ಎಂದರೆ ಸರಿ.

ನಾನು ಕಾನೂನು ಪದವೀಧರಳು. 2012 ರಲಿಲ ಕಾನೂನ ಪದವಿ ಮುಗಿದಿರುತ್ತದೆ. ನಾನು 4 ವರ್ಷ ವಕೀಲರ ವೃತ್ತಿಯನ್ನು ಮಾಡಿರುತ್ತೇನೆ. ವಕೀಲ ವೃತ್ತಿಯನ್ನು ಬಿ.ಟಿ ಪಾಟೀಲ ಅವರ ಬಳಿ ಮಾಡಿರುತ್ತೇನೆ. ನಂತರ ಮದಮೆಯಾಯಿತು. ಹುಬ್ಬಳ್ಳಿಗೆ ಹೋಗಿರುತ್ತೇನೆ. ಅಲ್ಲಿ ಎಸ್ ಕೆ ಕುಲಕರ್ಣಿ ವಕೀಲರ ಬಳಿ ಕೆಲಸ ಮಾಡುತ್ತಾ ಇರುತ್ತೇನೆ. ಈಗ್ಯ 5 ವರ್ಷದಿಂದ ವಕೀಲರ ವೃತ್ತಿಯನ್ನು ಮಾಡುವುದನ್ನು ಬಿಟ್ಟಿರುತ್ತೇನೆ. ಮಗು ಜನಿಸಿದರಿಂದ ಬಿಟ್ಟುರುತ್ತೇನೆ. ನನಗೆ ಮೊಗಾಸ್ ರವರು ಬರೆದ ಡ್ರಾಫ್ಟಿಂಗ್ ಆ್ಯಂಡ್ ಕನವೆನ್ಸಿಂಗ್ ಬುಕಿನ ಬಗ್ಗೆ ನನಗೆ ಮಾಹಿತಿ ಇಲ್ಲ. ಲಾವ್ ಆಫ್ ವಿಲ್ಸ ಬಗ್ಗೆ ಮಾಹಿತಿ ಇದೆ. ಸದರಿ ಕಾನೂನಿನ ಪ್ರಕಾರ ಒಬ್ಬ ವ್ಯಕ್ತಿ ಡೆತ್ ಬೆಡಲ್ಲಿ ಇದ್ದಾಗ ಅವನು ಮೃತ್ಯು ಪತ್ರವನ್ನು ಬರೆಯಬೇಕಾದರೆ ವೈದ್ಯರಿಂದ ಅವನ ಮಾನಸಿಕ ಸ್ಥಿತಿ ಗತಿಯ ಬಗ್ಗೆ, ದೈಹಿಕ ಹಾಗೂ ಮಾನಸಿಕ ಸ್ಥಿತಿಯ ಬಗ್ಗೆ ಸಂಬಂಧಿಸಿದ ವೈದ್ಯರಿಂದ ವೈದ್ಯಕೀಯ ದೃಢಿಕರಣ ಅವಶ್ಯಕತೆ ಇರುತ್ತದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ನಾನು ಹೇಳುವಂತಹ ಮೃತ್ಯು ಪತ್ರವು ಈಶ್ವರಪ್ಪನು ಅನಾರೋಗ್ಯದಿಂದ ಬಳಲುತ್ತಾ ಆಸ್ಪತ್ರೆಯ ಬೆಡಲ್ಲಿ ಇದ್ದ ಸಂದರ್ಬದಲ್ಲಿ ಆಗಿದೆ ಎಂದರೆ ಸರಿ. ನಾನು ಕಾನೂನು ವಿದ್ಯಾರ್ಥಿ ಇದ್ದ ಸಂದರ್ಬದಲ್ಲಿ ಲಾ ಆಫ್ ವಿಲ್ಸ ಹಾಗೂ ಲಾ

ಆಫ್ ಕೋಡಿಸೆಲ್ ಬಗ್ಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ಯಾವ ವ್ಯಕ್ತಿ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ದಾಖಲಾಗಿ ಚಿಕಿತ್ಸೆಯನ್ನು ಪಡೆಯುವ ಸಂದರ್ಬದಲ್ಲಿ ಬರೆದಂತಹ ಮೃತ್ಯು ಪತ್ರಗಳನ್ನು ಡೆತ್ ಬೆಡ್ ವಿಲ್ ಎಂದು ಕರೆಯುತ್ತಾರೆ ಎಂದರೆ ಸರಿ. ಈಶ್ವರಪ್ಪನು ಮೃತ್ಯು ಪತ್ರವನ್ನು ಬರೆಯಲು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಢ ಇದ್ದಾನೆ ಎಂದು ದೃಢಿಕರಿಸಿ ಎಂದು ವೈದ್ಯರನ್ನು ನಾನು ಕೋರಿಲ್ಲ. ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾದಾಗ ಅಂತಹ ವ್ಯಕ್ತಿಯ ಕೇಸ್ ಶೀಟನ್ನು ಆಸ್ಪತ್ರೆಯವರು ಇಟ್ಟಿರುತ್ತಾರೆ ಎಂದರೆ ಸರಿ. ನಾನು ಈಶ್ವರಪ್ಪನ ಮಾನಸಿಕ ಹಾಗೂ ದೈಹಿಲ ಸ್ಥಿತಿ ಗತಿಯನ್ನು ತಿಳಿದುಕೊಳ್ಳಲು ಅವನಿಗೆ ಸಂಬಂಧಿಸಿದ ಕೇಸ್ ಶೀಟನ್ನು ನಾನು ಪರಿಶೀಲಿಸಿರುವುದಿಲ್ಲ. ನನಗೆ ಇಂಗ್ಲಿಷ ಓದಲು ಬರೆಯಲು ಬರುತ್ತದೆ. ನಿಡಿ-23 ಈಶ್ವರಪ್ಪನ ಕೇಸ್ ಶೀಟ. ನಿಡಿ-23 ರಲ್ಲಿ ಈಶ್ವರಪ್ಪನ ಆರೋಗ್ಯವು ಸುಧಾರಿಸಿರುವುದಿಲ್ಲ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಈಶ್ವರಪ್ಪನು ಚೇತರಿಸಿಕೊಂಡಿದ್ದನು ಎದು ಹೇಳುವ ಬಗ್ಗೆ ನಾನು ದಾಖಲೆಯನು ನೋಡಿಲ್ಲ.

ಈಶ್ವರಪ್ಪನನನ್ನು ಯಾವ ಕೊಠಡಿಯಲ್ಲಿ ದಾಖಲಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಸ್ವತಃ ವಿಶೇಷ ವಾರ್ಡಿನಲ್ಲಿ ದಾಖಲಾಗಿತ್ತು ಎಂದು ನುಡಿಯುತ್ತಾರೆ. ಈ ವಿಷಯವನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿಲ್ಲ. ವಾ. ಸಾ. 2 ರವರ ಪರಿಚಯ ನನಗೆ ಇರುವುದಿಲ್ಲ. ಅವರನ್ನು ಮೊದಲನೇ ಬಾರಿಗೆ ಅಲ್ಲಿಯೇ ನೋಡಿರುತ್ತೇನೆ. ನಾನು ಲಿಂಗಾಯತ ಜಾತಿಯ ಬಣಗಾರ ಉಪಜಾತಿಗೆ ಸೇರಿರುತ್ತೇನೆ. ಯಾವುದೇ ಕಚ್ಚಾ ಮೃತ್ಯು ಪತ್ರವನ್ನು ಬರೆದಾಗ ಸದರಿ ಕಚ್ಚಾ ಮೃತ್ಯು ಪತ್ರವನ್ನು ಕಡ್ಡಾಯವಾಗಿ ಅದರ ಮೂಲ ಪತ್ರದೊಂದಿಗೆ ಇಡಬೇಕು ಎಂದರೆ ಸರಿ. ಯಾವ ದಿನಾಂಕದಂದು ನಾನು ಆಸ್ಪತ್ರೆಗೆ ಬರಬೇಕು ಎಂದು ಈಶ್ವರಪ್ಪನು ನನಗೆ ಹೇಳಿದ್ದನು ಎನ್ನುವ ಬಗ್ಗೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಮು.ವಿ. ಪ್ರಮಾಣ ಪತ್ರದಲ್ಲಿ ನಾನು ಮೊದಲನೇ

ಬಾರಿಗೆ ಆಸ್ಪತ್ರೆಗೆ ಯಾವ ದಿನಾಂಕದಂದು, ಹಾಗೂ ಎಷ್ಟು ಸಮಯಕ್ಕೆ ಹೋಗಿದ್ದೆನು ಎಂದು ಬರೆದಿಲ್ಲ ಎಂದರೆ ಸರಿ.

ನಿಡಿ-23 ರಲ್ಲಿ ಈಶ್ವರಪ್ಪನು ಸಾರಾಯಿ ಕುಡಿತದ ಚಟದಿಂದ ಕರಳುಗಳು ವಿಫಲವಾಗಿ ಅನಾರೋಗ್ಯದಿಂದ ಬಳಲುತ್ತಾ ಇದ್ದಾನೆ ಎಂದು ಬರೆಯಲಾಗಿದೆ ಎಂದರೆ ಸರಿ. ನಿಡಿ-23 ರ ಪ್ರಕಾರ ಈಶ್ವರಪ್ಪನು ಬೆಡ್ ಮೇಲೆ ಇದ್ದಾಗ ಹೊರಳಾಡುವಂತಹ ಸ್ಥಿತಿಯಲ್ಲಿ ಇರುವುದಿಲ್ಲ ಎಂದು ಉಲ್ಲೇಖವಿದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಈಶ್ವರಪ್ಪನು ದೈಹಿಕವಾಗಿ ಹಾಗೂ ಮಾನಸಿಕವಾಗಿ ದೃಢಿವಾಗಿದ್ದು ಯಾವುದೇ ಪತ್ರವನ್ನು ಬರೆಯಲು ಶಕ್ತನಿರುತ್ತಾನೆ ಎಂದು ಸಂಬಂಧಿಸಿದ ವೈದ್ಯರಿಂದ ದೃಢಿಕರಣ ಪತ್ರವನ್ನು ಪಡೆದಿಲ್ಲ ಎಂದರೆ ಸರಿ. ಯಾವುದೇ ವ್ಯಕ್ತಿ ಒಂದು ದಾಖಲೆಯನ್ನು ಬರೆಯದೇ ಇರುವಂತಹ ಸ್ಥಿತಿಯಲ್ಲಿ ಇದ್ದಾಗ ಬೇರೇ ವ್ಯಕ್ತಿ ಕಾಗದವನ್ನು ಬರೆದಾಗ ಆ ವ್ಯಕ್ತಿ ಸದರಿ ಕಾಗದದಲ್ಲಿ ವಿಷಯವನ್ನು ಓದಿ ಹೇಳಿ ಸರಿ ಇದೆ ಎಂದು ಒಪ್ಪಿದಾಗ, ಆ ಕಾಗದವನ್ನು ಬರೆದ ವ್ಯಕ್ತಿಯು ಆ ಬಗ್ಗೆ ದೃಢಿಕರಿಸಿ ರುಜು ಮಾಡಬೇಕಾಗುತ್ತದೆ ಎಂದರೆ ಸರಿ. ನಿಪಿ-33 ರಲ್ಲಿ ಈ ಮೇಲೆ ಹೇಳಿದಂತೆ ಯಾವುದೇ ಉಲ್ಲೆಖವಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದಿನ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ.

ಸಹಿ: 11.01.2022

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.